UNIVERSAL LIBRARY
OU_200856
UNIVERSAL LIBRARY

ಮಕ್ಕಳ ಕಥೆಗಳು.
ಬಾಲಸಾಹಿತ್ಯ ಮಂಡಲ,
ಲಿಮಿಟೆಡ್,
ಕೊಡಿಯಾಲಬೈಲು, ಮಂಗಳೂರು.

# ಬೊಮ್ಮನ ಹಳ್ಳಿಯ ಕಿಂದರಿ ಜೋಗಿ

ಮೈಸೂರಲ್ಲಿರುವ
ಕೆ. ವಿ. ಪುಟ್ಟಪ್ಪ,
ಇವರಿಂದ ರಚಿತವಾದುದು.

1930

ಬೆಲೆ: ೦—೩—೮.

PUBLISHED BY

THE BALA SAHITYA MANDALA, LTD.,

Kodialbail, Mangalore.

*Copyright*

FOLK TALES FOR LITTLE FOLKS SERIES

ILLUSTRATED ONE ANNA EACH

1. How The Mice Danced.
2. The Lark And Its Eggs.
3. The Crow And The Sparrow.
4. The Wood Louse Is Dead.

Printed at the Sadananda Co-operative Printing Works, Limited, Mangalore.

# ಮುನ್ನುಡಿ

ಇಂದಿನ ಹೊಸ ಹಾದಿಯ ಕನ್ನಡ ಕವನಗಾರರಲ್ಲಿ ಒಬ್ಬರಾದ ಶ್ರೀನಿವಾಸ್ ಕೆ. ವಿ ಪುಟ್ಟಪ್ಪನವರ ಬೊಮ್ಮನ ಹಳ್ಳಿಯ ಕಿಂದರ ಜೋಗಿ ಎಂಬ ಹೆಸರಿನ ಈ ಕವನವು ರೊಬರ್ಟ್ ಬ್ರೌನಿಂಗ್ ಕವಿಯಿಂದ ರಚಿತವಾದ 'ದಿ ಪಾಯ್ಡ್ ಪಾಯ್ಪರ್ ಆಫ್ ಹೆಮೆಲಿನ್' (The Pied Piper of Hameline) ಎಂಬ ಇಂಗ್ಲಿಷ್ ಕವಿತೆಯ ಕನ್ನಡ ಅನುವಾದವು. ಇದು ಮೈಸೂರು ಮಹಾರಾಜರ ಕಾಲೇಜು ಕರ್ನಾಟಕ ಸಂಘದಿಂದ ೧೯೨೮ರಲ್ಲಿ ಹೊರಬಿದ್ದ 'ಕಿರಿಯ ಕಾಣಿಕೆ' ಎಂಬ ಹೆಸರಿನ ಕವನ ಪುಸ್ತಕದಲ್ಲಿ ಮೊತ್ತಮೊದಲು ಪ್ರಕಟವಾಯಿತು. ಹೊಸ ಹಾದಿಯ ಇಂಥ ಕವನಗಳ ಪರಿಚಯವನ್ನು ನಮ್ಮ ಹಳ್ಳಿಯ ಮಕ್ಕಳಿಗೆ ಮಾಡಿಕೊಡಬೇಕೆಂಬ ಉದ್ದೇಶದಿಂದ ಶ್ರೀನಿವಾಸ್ ಪುಟ್ಟಪ್ಪನವರ ಅನುಮತಿಯನ್ನು ಪಡೆದು ಅವರ ಈ ಚಿಕ್ಕ ಕೃತಿಯನ್ನು ಪುಸ್ತಕ ರೂಪವಾಗಿ ಅಚ್ಚುಹಾಕಿಸಿದೆ. ಅವರು ಅನುಮತಿಯನ್ನು ಕೊಟ್ಟುದಕ್ಕಾಗಿಯೂ ಸದಾನಂದ ಮುದ್ರಣಾಲಯದವರು ಇದನ್ನು ತ್ವರೆಯಿಂದ ಮುದ್ರಿಸಿ ಕೊಟ್ಟುದಕ್ಕಾಗಿಯೂ ಮಂಗಳೂರು ಬಾಲಸಾಹಿತ್ಯ ಮಂಡಲದ ಚಾಲಕರು ಈ ಮೂಲಕ ಅನಲ್ಪರ ಉಪಕಾರಸ್ಮರಣೆಯನ್ನು ಮಾಡುತ್ತಾರೆ.

# ಬೊಮ್ಮನಹಳ್ಳಿಯ ಕಿಂದರಿಜೋಗಿ

ತುಂಗಾತೀರದ ಬಲಗಡೆಯಲ್ಲಿ
ಹಿಂದಲ್ಲಿದ್ದುದು ಬೊಮ್ಮನ ಹಳ್ಳಿ.
ಅಲ್ಲೀ ಇಲಿಗಳ ಕಾಟವೆ ಕಾಟ!
ಅಲ್ಲಿಯ ಜನಗಳಿಗತಿಗೋಳಾಟ!
ಇಲಿಗಳು ಬಡಿದುವು ನಾಯಿಗಳ!
ಇಲಿಗಳು ಕಡಿದುವು ಬೆಕ್ಕುಗಳ!
ಕೆಲವನು ಕೊಂದುವು, ಕೆಲವನು ತಿಂದುವು,
ಕೆಲವನು ಬೆದರಿಸಿ ಹಿಂಬಾಲಿಸಿದುವು.
ಅಲ್ಲಿಯ ಮೂಷಿಕಸೈನಿಕರವು ಸೊಕ್ಕಿ
ಎಲ್ಲರ ಮೇಲೆಯು ಕೈಬಾಯಿಕ್ಕಿ
ಹೆದರಿಕೆಯಿಲ್ಲದೆ, ಬೆದರಿಕೆಯಿಲ್ಲದೆ
ಕುಣಿದುವು ಯಾರನು ಲೆಕ್ಕಿಸದೆ!
ಹಾಲಿನ ಮಡಕೆಯನೊಡೆದುವು ಕೆಲವು;
ಅನ್ನದ ಗಡಿಗೆಯ ಪುಡಿಮಾಡಿದುವು.
ಬಡಿಸುವ ಅಡುಗೆಯ ಭಟ್ಟನ ತಡೆದು,
ಕೈಯಲ್ಲಿರುವಾ ಸಟ್ಟುಗವ
ಭೀತಿಯೆ ಇಲ್ಲದೆ ನೆಕ್ಕಿದುವು!
ಊಟವ ತಪ್ಪುತ ಸೊಕ್ಕಿದುವು
ಧಾನ್ಯವನೆಲ್ಲವು ಮುಕ್ಕಿದುವು!
ಪೀಪಾಯಿ ಒಳಗಡೆ ಗೂಡನು ಮಾಡಿ
ಹೆತ್ತುವು ಮರಿಗಳನು.
ಸೇಜದ ಒಳಗಡೆ ಆಟವನಾಡಿ
ಕಿತ್ತುವು ನರಿಗೆಯನು!

ಗೋಡೆಗೆ ತಗುಲಿಸಿದಂಗಿಯ ಜೇಬನು
ದಿನವೂ ಬಸ್ತಿಯ ಮಾಡಿದುವು!
ಮಲಗಿರೆ ಹಾಸಿಗೆಯನ್ನೇ ಹರಿದುವು
ಕೇಶಚ್ಛೇದವ ಮಾಡಿದುವು!
ಬೆಣ್ಣೆಯ ಕದ್ದುವು, ಬೆಲ್ಲವ ಮೆದ್ದುವು
ಒಗ್ಗೆಗೆ ಬಿದ್ದುವು ಒಸದಿನವು!
ಗೌಡರು ಮಾತಾಡುತ ಕುಳಿತಲ್ಲಿ
ಬಹಳ ಗಲಾಟೆಯ ಮಾಡಿದುವು!
ಗರತಿಯರಾಡುವ ಹರಟೆಗೆ ತುಂಬಾ
ತೊಂದರೆಯಿತ್ತುವು ಗಲಿಬಿಲಿಮಾಡಿ.
ಊರಿನ ಮಕ್ಕಳ ಕೈಯಲ್ಲಿದ್ದ
ತಿಂಡಿಯ ಕಸಿದುವು ಧೈರ್ಯದಲಿ!

೨

ಇಲಿಗಳ ಕೊಲ್ಲಲು ಊರಿನ ಜನರು
ತುಂಬಾಯತ್ನವ ಮಾಡಿದರು,
ಕಡಿದರೆ ಮುರಿದುವು ಕತ್ತಿಗಳೆಲ್ಲಾ
ಹೊಡೆದರೆ ಮುರಿದುವು ಕೋಲುಗಳು.
ಇಲಿಗಳ ಬೇಟೆಯನಾಡುತಲಿರಲು
ಮುರಿದುವು ತಿಮ್ಮನ ಕಾಲುಗಳು!
ಬೇಟೆಯನಾಡಲು ಅಡುಗೆಯ ಮನೆಯಲಿ
ಬಿದ್ದಳು ಬಳೆಯೊಡೆದಜ್ಜಮ್ಮ!
ಶೃಂಗಾಮಲಕದ ತೈಲವ ಹಚ್ಚಿದ
ಶೇಷಕ್ಕನ ನುಣ್ಣಗೆ ಫಣಿವೇಣಿ,
ಬೆಳಗಾಗೇಳುತ ಕನ್ನಡಿ ನೋಡೆ
ಇಲಿಗಳಿಗಾಗಿತ್ತೂಟದ ಫೇಣಿ!
ರಾತ್ರಿಯ ವೇಳೆಯು ತೋರುತ ಕೊಟ್ಟಿಗೆ
ಗುಂಡುವು, ತಿಂದುವು ದನಗಳ ಕಟ್ಟಲು.

ಹರಿದುವು ಕರುಗಳ ಬಾಲಗಳ!
ಸಿದ್ಧೋಜೈಗಳು ಶಾಲೆಗೆ ಹೋಗಿ
ಪಾಠವ ಬೋಧಿಸುತಿದ್ದಾಗ,
ಅಂಗಿಯ ಜೇಬಿಂ ಹೆಳವಿಲಿಯೊಂದು
ಚಂಗನೆ ನೆಗೆಯಿತು ತೂತನು ಮಾಡಿ.
ಲೇವಡಿ ಎಬ್ಬಿಸೆ ಬಾಲಕರಾಳಿ
ಗುರುಗಳಿಗಾಯಿತು ಬಲುಗೋಳು!
ಹರಿಯಲು ರೇಶ್ಮೆಯ ರವಕೆಯ ಕಣಗಳ,
ಕೊಚ್ಚಲು ಕಾಗದ ಹರಿಯಲು,
ಮುಂಗಾಣದೆ ಬಟ್ಟಕ್ಕನು ಹೋಗಿ
ಬತ್ತಿದ ಕೆರೆಯನು ಹಾರಿದನು.
ಸತ್ತೇ ಉಸ್ಸುತ ಚೀರಿದಳು!
ಜೇಗನ ಬಾನದಿ ಮಿಸುತ ನೋಡಲು
ಘಟ್ಯಾಶಾಸ್ತ್ರಿಯ ಒಸಿವಾರ
ಇಲಿಗಳಿಗಾಗಿತ್ತಾಹಾರ!
ಒಂದಿಲಿ ಸತ್ತರೆ ಎರಡಿಲಿಯಾದುವು.
ಕೊಂದರೆ ಒಂದನು ಎರಡೈತಂದುವು!
ಇಲಿಗಳ ಕಾಟವ ಸಹಿಸಲು ಅರದೆ
ಊರಿನ ಜನರೆಲ್ಲರು ಒಂದಾಗಿ
ಮೂಷಿಕಯಾಗವ ಮಾಡಿದರು,
ದೇವರ ಪೂಜೆಯ ಮಾಡಿದರು,
ಹರಕೆಯ ಹೊತ್ತರು, ಕಾಣಿಕೆ ತೆತ್ತರು
ಮಂತ್ರವ ದಿನದಿನ ಹೇಳಿದರು!
ನಿಷ್ಫಲವಾದುವು ಮಂತ್ರಗಳೆಲ್ಲಾ
ಬಾಯ್ ಬಾಯ್ ಕಳೆದರು ಶಾಸ್ತ್ರಿಗಳೆಲ್ಲಾ
ಕಣ್ ಕಣ್ ಬಿಟ್ಟರು ಪಂಡಿತರೆಲ್ಲಾ
ಕಂಬನಿಗರೆದರು ಜನರೆಲ್ಲಾ!

೩

ಮುಂದಿನ ಮಾರ್ಗವ ಕಾಣದೆ ಜನರು,
ಗೌತಮ ಬಳಿ ಹೋದರು ಗುಂಪಾಗಿ.
ಗೌತಮ ಮನೆಯಿಂದೀಚೆಗೆ ಬಂದನು
ಕಂಗಳನರಳಿಸಿ ಬೆರಗಾಗಿ!
ಕೂಗಿದರೆಲ್ಲರು ಗೌತಮ ಕುರಿತು,
ಗೌತಮ ನಿಂತನು ಸ್ಮೃಮರೆತು:
"ಥೂ! ಛೀ! ಗೌತಮ ನೀ ಹಾಳಾಗ!
ಮಾಟಿಯ ಗಿಳಿಗಳ ಕೊಲ್ಲಿಸೊ ಬೇಗ!
ತಂಗಿಯ ಮಾತ್ರ, ಕಾಸೂ ಬಿಡದೆ
ಹೊಡೆದೂ ಬೈದೂ ಬಿತ್ತ್ಯನೆ ನೀನು.
ನಿನ್ನ ರುಮಾಲಿನ ಬಲ ಹಾಳಾಗ,
ನಿನ್ನೀ ಗಂಟಲು ಕಟ್ಟೀ ಹೋಗ!
ಗಿಳಿಗಳ ಸಮಿಸವ ಕೊಲ್ಲಿಸೂ ಬೇಗ!
ಬೆಂಕಿಯನಿಡುವೆವು ನಿನ್ನೀ ಮನೆಗೆ,
ಕೊಲ್ಲಿಸದಿರೆ ಬರೆಯುತಿಹೆವು ನಿನಗೆ!
ಹೆಸರಿಗೆ ಮಾತ್ರಾ ಗೌತಮ ನೀನು
ಮಾನವೆ ಇಲ್ಲವೆ, ಛೀ! ನಿನಗೇನು?

೪

ಈ ಪರಿ ಬೈದರು ಜನರೆಲ್ಲಾ
ಗೌತಮ ಬಾಯೇ ಬಿಡಲಿಲ್ಲಾ!
ಜನರೆಲ್ಲಾ ಹಿಂತಿರುಗಿದ ಮೇಲೆ
ಗೌತಮ ಓಡಿದ ತಾಪಟಿಗೆ:
ಕರೆದನು ಊರಿನ ತಲೆಯಾಳುಗಳ
ಕಟ್ಟೆ ಮೇಲಲ್ಲಿಯೆ ಸಭೆಸೇರಿದರು.
ಜನರೆಲ್ಲಾ ಚರ್ಚೆಯ ಮಾಡಿದರು:
ಜನರೆಲ್ಲಾ ವಾದವ ಹೂಡಿದರು.
ಹೊರಟುವು ಯುಕ್ತಿಯ ಮಾತುಗಳು,

ಮಾತೊಳು ಮನೆಯನು ಕಟ್ಟಿದರು.
ಅಂತೂ ಇಲಿಗಳ ಕೊಲ್ಲುವ ಬಗೆಯು
ಒಬ್ಬರಿಗಾದರು ಹೊಳೆಯಲೆ ಇಲ್ಲ.
ಗೌಡನು ತಲೆತಲೆ ಹೊಡಕೊಂಡ.
ಇಲ್ಲದೆ ಎದೆಯೆದೆ ಬಡಕೊಂಡ.
ಕಡೆಗಾ ರಂಗೇಗೌಡನು ಊಂಗೆ
ಬೆಂಕಿಯ ಹಾಕುವ ಸಲಹೆಯ ಕೊಟ್ಟ'
ಊರನೆ ಒಂಟಿತ ಬನಬೇಕೆಂದು
ರಾಮರಾಶಾಸ್ತ್ರಗಳಾಡಿದರು!
ತಪ್ಪಿಂಬಿಟ್ಟರು ಚಿಂತಿಸಿ ಚಿಂತಿಸಿ
'ದೇವರು ಮಾಡಿದುದಾಗಲಿ' ಎಂದರು!
ಸಲಹೆಗಳೆಲ್ಲಾ ಮುಗಿದಾ ಮೇಲೆ
ಗೌಡನು ಜನರನು ಕುರಿತಿಂತೆಂದ,
'ಇಲಿಗಳ ನಾಶಕುಪಾಯವನಾರು
ತೋರಿಸಿ ಕೊಡುವರೊ, ಅವರಿಗೆ ಆರು
ಸಾವಿರ ನಾಣ್ಯಗಳೀಯುವೆ ನಾನು
ತಿಳಿದವರಿದ್ದರೆ ಒಪ್ಪಿರಿ! ಹುಂ?'

೫

ಒಬ್ಬರ ಮೊಗವನು ಒಬ್ಬರು ನೋಡಿ
ಮಾತಾಡದೆ ಇದ್ದರು ಜನರೆಲ್ಲಾ!
ಗೌಡನು ಕೂಗಿದ ಮೊದಲನೆ ಸಾರಿ
ಯಾರೂ ಮುಂದಕೆ ಬಾರಲೆ ಇಲ್ಲ.
ನಾಣ್ಯಗಳೆಂಬಾ ಮಾತನು ಕೇಳಿ
ಮುಂಗೈ ಕಟ್ಟಿರು ಕೋಪವ ತಾಳಿ
ಬ್ರಹ್ಮನ ರಾಣಿಯು ದೂರಿದರು:
ಮಿದುಳನು ನೀಡದೆ ತಲೆಯನು ಮಾಡಿದ
ಕಮಲಜನನು ಬೈದಾಡಿದರು!

ಸುತ್ತಲು ನೋಡುತ ಗೌಡನು ಮತ್ತೆ
ಎರಡನೆ ಸಾರಿಯು ಕೂಗಿದನು.
ಆಸೆಯನೆಲ್ಲವ ನೀಗಿದನು!
ಕೂಗಿದನಾತನು ಮೂರನೆ ಸಾರಿ
ಮಾತೇ ಇಲ್ಲವು ಎಲ್ಲಿಯು ಮೌನ!
ಮುಂದಲೆ, ಹಿಂದಲೆ ಎರಡನು ಉಜ್ಜುತ
ಕಂಗಳ ಕೆರಳಿಸಿ, ಹಲ್ಲನು ಕಡಿಯುತ,
ಶೆಟ್ಟರು ಬಲು ಪೇಚಾಡಿದರು.
ಅನೇಶನ ದಯೆಪಾಲಿಸು ಎನ್ನುತ
ನಾಣೆಯ ಪರಿಪರಿ ಬೇಡಿದರು!

೭

ಏನಿದು ಗುಜುಗುಜು ಗುಂಪಿನಲಿ?
ನೋಡಿದರೇನಾಶ್ಚರ್ಯವನು!
ಆಲಿಸಿ! ದೂರದ ಕಿಂದರಿ ನಾದ!
ಬರುವನು ಯಾರೋ ಕಿಂದರಿ ಜೋಗಿ!
ಹತ್ತಿರ, ಹತ್ತಿರಕವನೈತಂದ
ಬಂದಿತು ಜನರಿಗೆ ಬಂದಾನಂದ!
ನೋಡಿರಿ! ನೋಡಿರಿ ಕಿಂದರಿ ಜೋಗಿ!
ನೋಡಿದರೆಲ್ಲರು ಬೆರಗಾಗಿ!
ಬಂದನು! ಬಂದನು ಕಿಂದರಿ ಜೋಗಿ!
ಕೆದರಿದ ಕೂದಲು ಗಡ್ಡದ ಜೋಗಿ!
ನಾನಾ ಬಣ್ಣದ ಬಟ್ಟೆಯ ಜೋಗಿ!
ಕೈಯಲಿ ಕಿಂದರಿ ಹಿಡಿದಾ ಜೋಗಿ!
ಕುದುರೆಯ ಗೊರಸಿನ ಅಡಿಗಳ ಜೋಗಿ!
ಕಡವೆಯ ಕೊಂಬಿನ ತಲೆಯಾ ಜೋಗಿ!
ಆನೆಯ ಕಿವಿಗಳ ಕಿಂದರಿ ಜೋಗಿ!
ಹಂದಿಯ ದಾಡೆಯ ಕೋರೆಯ ಜೋಗಿ!
ಮಂಗನ ಮೂತಿಯ ಮುಖವಿಹ ಜೋಗಿ!

ಬಂದನು ಬಂದನು ಕಿಂದರಿ ಜೋಗಿ!
ಹಾರುತ, ತೇಲುತಲಿಳಿದನು ಜೋಗಿ!
ಕೈಕೈ ಮುಗಿಯುತ ಕಣ್ಣೀರಿಡು
ಹಿಂದಕೆ ಸರಿಯುತ ಜನರೆಲ್ಲಾ,
ದಾರಿಯ ಬಿಟ್ಟರು ಕಿಂದರಿ ಜೋಗಿಗೆ!
ಜೋಗಿಯು ಹತ್ತಿದ ಗೌಡನ ಕಟ್ಟೆಯ
ಗೌಡನ ಹೃದಯವು ಬಾಯ್ಗೇ ಬಂದಿತು
ಗಡಗಡ ಗಡಗಡ ನಡುಗಿದನು!
ತೊದಲುತ, ಬೆದರುತ, ಕಂಪಿತಕಂಠದಿ
ನೀನಾರೆಂದನು ಜೋಗಿಯ ಕುರಿತು.
ಅದಕಾ ಜೋಗಿಯು ಇಂತೆಂದ:
ಕೇಳಿದರೆಲ್ಲರು ಬಾಯ್ಬಿಟ್ಟು.
'ಹಿಮಗಿರಿಯಲ್ಲಿಹ ಜೋಗಿಯು ನಾನು
ಪರಮೇಶ್ವರನಿಗೆ ಗೆಳೆಯನು ನಾನು,
ನಿಮ್ಮ ಗೋಳನು ಕೇಳಿದ ಶಿವನು
ನನ್ನನ್ನಿಲ್ಲಿಗೆ ಕಳುಹಿದನು.
ಇಲಿಗಳನೆಲ್ಲಾ ಕೊಂದರೆ ಆರು
ಸಾವಿರ ನಾಣ್ಯಗಳೀಯುವೆಯಷ್ಟೆ?'

೭

ಉಕ್ಕಿತು! ಉಕ್ಕಿತು ಗೌಡನ ಸಂತಸ!
ಶಹಭಾಸೆಂದರು ಜನರೆಲ್ಲ.
ಗೌಡನು ಜೋಗಿಯ ಕುರಿತಿಂತೆಂದ;
ಜನರದನೆಲ್ಲಾ ಕೇಳಿದರು;
"ಬೇಕಾದುದ ನಾ ಕೊಡುವೆನು ಜೋಗಿ
ಆರೇಕಿನ್ನೆರಡಾದರು ಕೊಡುವೆನು.
ಬೇಕಾದುದನೆಲ್ಲವ ನೀ ಕೇಳು
ಊರೇ ನಿನ್ನದು! ನಾ ನಿನ್ನಾಳು!
ಆದರೆ ಒಂದೇ ಸಂದೇಹ—

ಇಲಿಗಳನೋಡಿಪ ಶಕ್ತಿಯು ನಿನಗೆ
ಹಿರಿದಾಗಿರುವುದು ಹೌದಷ್ಟೆ
ಜೋಗಿಯು ಹಿಂತಿರುಗೆಲ್ಲರ ನೋಡಿ,
ಕೈಯಾ ಕಿಂದರಿಯನು ಸರಿಮಾಡಿ,
ಗಡ್ಡವ ನೀವುತ ದುರದುರು ನೋಡಿ,
ಗೌಡನ ಕಡೆ ತಿರುಗಿಂತೆಂದ:
'ಕೃತಯುಗದೊಳು ಕೈಲಾಸದೊಳು
ಇಲಿಗಳ ಕಾಟವು ಮಿತಿಮೀರೆ,
ಇಲಿಗಳ ಕೊಲ್ಲುವೆನೆಂಬಾ ರೋಷ
ಬರಲು ಭೈರವನಾದನು ಈಶ
ಆದರು ಆಗದೆ ಮೂಷಿಕನಾಶ
ನಂದಿಯ ಕಳುಹಿದನೆನ್ನೆಡೆಗೆ,
ಕೊಂದೆನು ಅವುಗಳ ನಾ ಕಡೆಗೆ'
ಕಾಮನ ದಹಿಸಿದ ಹಣೆಗಣ್ಣು
ಮೂಷಿಕರೋಗವ ಸುಡಲಿಲ್ಲ'
ಜೋಸ್ತ್ರನ ಹಕ್ಕಿಯು ಬಸರೇ ಕೇಳಿ
ಮುಂದಿನ ಕಥೆಯನು ಮುಗಿಸುವೆ ಹೇಳಿ.
ದ್ವಾಪರ ಯುಗದೊಳು ವೈಕುಂಠದೊಳು
ಮೂಷಿಕಸೈನ್ಯಕು ಜಯವಿಜಯರಿಗೂ
ಭೀಕರಕಾಳಗ ಜರುಗಿತು, ಕಡೆಗೆ
ಆ ಜಯವಿಜಯರು ವಿಷ್ಣುವಿನೆಡೆಗೆ
ಓಡುತ ಹೋದರು ಮೊರೆಯಿಡಲು
ಮೂಷಿಕಸೈನ್ಯಕೆ ಸೈಸೋತು!
ಕಡೆಗಾ ವಿಷ್ಣುವೆ ಚಕ್ರವ ಹಿಡಿದು
ಮೂಷಿಕಬಳಗವ ಕೊಲ್ಲುವೆನೆಂದು
ಕದನವ ಮಾಡಲು ಇಲಿಗಳ ಕೂಡೆ
ಮೂರ್ಛೆಗೆ ಸಂದನು ಬಲುಬಳಲಿ!
ವಿಷ್ಣುವೆ ಸೋತನು ಕದನದಲಿ!

ಪೀತಾಂಬರವನು ಹರಿದುವು ಕೆಲವು:
ಚಕ್ರದ ಹಲ್ಲನು ಮುರಿದುವು ಕೆಲವು!
ಕೌಸ್ತುಭರತ್ನವನಪಹರಿಸಿದುವು!
ಶಂಖವ ಭೂಂ ಭೂಂ ಊದಿದುವು!
ಗದೆಯನ್ನೆಳೆದು ಬಿಸಾಡಿದುವು!
ರಾಕ್ಷಸಕೋಟಿಯ ಕೊಂದಾ ಚಕ್ರವು
ಬರಿದಾಯಿತು ಇಲಿಗಳ ಮುಂದೆ.
ಕಡೆಗೆನ್ನನು ಕರೆಕಳುಹಿದನು,
ಮೂಷಿಕನಾಶನ ಮಾಡಿದೆನು!
'ಕಿಂದರಿಜೋಗಿಯೆ ನಿಲ್ಲಿಸು, ಸಾಕು;
ನೀ ಗಟ್ಟಿಗನೆಂಬುದು ಗೊತ್ತಾಯ್ತು!
ನಿನ್ನ ಪರಾಕ್ರಮಕಂತ್ಯವೆ ಇಲ್ಲ.
ಗೆಲೆಯರು ನಿನ್ನನು ಮಹೇಶ್ವರರೆಲ್ಲ.
ನಮ್ಮೂರಿಲಿಗಳ ಸಂಹರಿಸು,
ಬೇಕಾದುದ ನಾನೀಯುವೆನು!'
ಎಂದನು ಗೌಡನು ಸಂತಸದಿಂದ
ಜನತತಿಗಾದುದು ಅತ್ಯಾನಂದ!

೮

ಮರುಮಾತಾಡದೆ ಕಿಂದರಿಜೋಗಿ
ಕಟ್ಟೆಯನೇರಿದನು ಬೀದಿಗೆ ಹೋಗಿ.
ಗಡ್ಡವ ನೀವುತ ಸುತ್ತಲು ನೋಡಿ
ಮಂತ್ರವ ಬಾಯಲಿ ಮಣಮಣ ಹಾಡಿ,
ಕಿಂದರಿ ಬಾರಿಸತೊಡಗಿದನು,
ಜಗವನೆ ಮೋಹಿಸಿತಾ ನಾದ!
ಏನಿದು? ಏನಿದು? ಗಜಿಬಿಜಿ ಎಲ್ಲಿ!
ಊರನೆ ಮುಳುಗಿಪ ನಾದವಿದೆಲ್ಲಿ!
ಇಲಿಗಳು! ಇಲಿಗಳು! ಇಲಿಗಳ ಹಿಂಡು!
ಬಿಳಬಿಳ ಬಂದುವು ಇಲಿಗಳ ದಂಡು!

ಅನ್ನದ ಮಡಕೆಯನಗಲಿದುವು!
ಜೋಳಿಯ ಗೂಡನು ತ್ಯಜಿಸಿದುವು!
ಬಂದುವು ಅಂಗಿಯ ಜೇಬನು ಬಿಟ್ಟು,
ಮಕ್ಕಳ ಕಾಲಿನ ಚೀಲವ ಬಿಟ್ಟು.
ಹಾರುತ ಬಂದುವು, ಓಡುತ ಬಂದುವು,
ನೆಗೆಯುತ ಬಂದುವು, ಕುಣಿಯುತ ಬಂದುವು,
ಜೋಗಿಯು ಬಾರಿಸೆ ಕಿಂದರಿಯ.

ಸಣ್ಣಿಲಿ, ದೊಡ್ಡಿಲಿ, ಮೂಗಿಲಿ, ಮುಂಡಿಲಿ
ಅಣ್ಣಿಲಿ, ತಮ್ಮಿಲಿ, ಅಪ್ಪಿಲಿ, ಅವ್ವಿಲಿ,
ಮಾವಿಲಿ, ಭಾವಿಲಿ, ಅಕ್ಕಿಲಿ, ತಂಗಿಲಿ,
ಗಂಡಿಲಿ, ಹೆಣ್ಣಿಲಿ, ಮುದುಕಿಲಿ, ಹುಡುಗಿಲಿ,
ಎಲ್ಲಾ ಬಂದುವು ಓಡೋಡಿ,
ಜೋಗಿಯು ಬಾರಿಸೆ ಕಿಂದರಿಯ!

ಬಂದುವು ನಾನಾಬಣ್ಣದ ಇಲಿಗಳು
ಕೆಂಪಿನ ಇಲಿಗಳು, ಹಳದಿಯ ಇಲಿಗಳು,
ಬೆಳ್ಳಿಲಿ, ಕರಿಯಿಲಿ, ಗರಿಯಿಲಿ, ಹೊಲಬಿಲಿ,
ಕುಂಕುಮರಾಗದ, ಚಂದನರಾಗದ,
ಹಸುರಿನ ಬಣ್ಣದ, ಪಚ್ಚೆಯ ವರ್ಣದ,
ಸಂಜೆಯ ರಾಗದ, ಗಗನದ ರಾಗದ,
ನಾನಾ ವರ್ಣದ ಇಲಿಗಳು ಬಂದುವು,
ಕುಣಿಯುತ ನಲಿಯುತ ಸಂತಸದಿ,
ಜೋಗಿಯು ಬಾರಿಸೆ ಕಿಂದರಿಯ!

ನೋಡಿರಿ! ಕಾಣಿರಿ! ಬರುತಿಹುವಲ್ಲಾ!
ಅಟ್ಟದ ಮೇಲಿಂ ಬರುವುವು ಕೆಲವು!
ಕಣಜದ ಕಡೆಯಿಂ ಬರುವುವು ಕೆಲವು!
ಓಹೋ! ಬಂದುವು ಹಿಂಡ್ಹಿಂಡಾಗಿ!
ಕುಂಟಿಲಿ, ಕಿವುಡಿಲಿ, ಹೆಳವಿಲಿ, ಮೂಗಿಲಿ,
ಚೀ! ಪೀ! ಎನ್ನುತ ಕೂಗುತಲೋಡಿ

ಗಹಗಹಿಸುತ ನಲಿ ನಲಿನಲಿದಾಡಿ
ಬಂದಿತು ಮೂಷಿಕಸಂಕುಲವು
ಜೋಗಿಯು ಬಾರಿಸೆ ಕಿಂದರಿಯು!

೮

ಬೊಮ್ಮನಹಳ್ಳಿಯ ಕಿಂದರಿಜೋಗಿ
ಹೊರಟನು ತುಂಗಾನದಿಯೆಡೆಗಾಗಿ.
ಕಿಂದರಿನಾದವು ಗಗನಕ್ಕೇರಿತು
ಇಲಿಗಳನೆಲ್ಲಾ ಮನಮೋಹಿಸಿತು!
ಕಿಂದರಿಜೋಗಿಯ ಹಿಂಬಾಲಿಸಿದರು
ಜನಗಳು ನೋಡುತಲು ಕೌತುಕವ,
ಜೋಗಿಯು ನಡೆದನು, ಇಲಿಗಳು ನಡೆದುವು,
ಸೇರಿದರೆಲ್ಲರು ನದಿಯೆಡೆಯು;
ಹೊಳೆಯಾ ಮರಳಿನ ಗುಡ್ಡೆಯು ತುಂಬಾ
ನೋಡಿದರೆಲ್ಲಿಯು ಮೂಷಿಕಗಣವೇ!
ಉಸಿರಾಡದೆ ನಿಂತರು ಜನರೆಲ್ಲಾ
ಮುಂದೇನಾಗುವುದೆಂದಲ್ಲಿ!
ವಿಬುಧರು ಕವಿದರು ಗಗನದಲಿ
ಹೂಮಳೆ ಕರೆದರು ಹರುಷದಲಿ;
ದುಂದುಭಿನಾದವ ಮಾಡಿದರು,
ಕಾಣದ ಬೆರಗನು ನೋಡಿದರು!
ಸುತ್ತಲು ನೋಡಿದ ಕಿಂದರಿಜೋಗಿ
ನಡೆದನು ಹೊಳೆಯಾ ನೀರಿನ ಮೇಲೆ!
ನೋಡಿದ ಜನರೆಲ್ಲರು ಬೆರಗಾಗಿ,
'ಜಯಜಯ ಜೋಗೀ!' ಎಂದರು ಕೂಗಿ!
ಇಲಿಗಳು ಒಂದರ ಮೇಲೊಂದು
ಹಿಂಬಾಲಿಸಿದುವು ಜೋಗಿಯನು;
ಬುಳುಬುಳು ನೀರೊಳು ಮುಳುಗಿದುವೆಲ್ಲಾ

ಹೆಣವಾಗಲ್ಲಿಯೆ ತೀರಿದುವು.
ಎಲ್ಲಾ ಮುಳುಗಿದುವೆಂದೆನೆ, ಅಲ್ಲಾ
ರಾವಣನಂದದ ಮೂಷಿಕವೊಂದು
ದೃಢವಾಗೀಜುತ ಸೇರಿತು ದಡವ!

೧೦

ಆಗದು ಜನರಿಗೆ ಈ ನುಡಿ ನುಡಿಯಿತು
ಕಿಂದರಿನಾದದ ಅನುಭವವ;
'ಕಿಂದರಿ ಬಾರಿಸಿದಾಗಲೆ ಎಲ್ಲಿಯು
ಹೋಳಿಗೆವಾಸನೆ ತುಂಬಿದುದು.
ಯಾರೋ ಹೋಳಿಗೆ ಮಾಡುವರೆಂದು
ಗೂಡನು ಬಿಟ್ಟೆವು ಹೊರಗಡೆ ಬಂದು.
ನೋಡಲು ಹಲ್ವದ ರಾಶಿಯು ಕಂಡವು
ವಿಧವಿಧ ತಿಂಡಿಗಳೆಲ್ಲಾ ಜೋಗಿಯ
ಸುತ್ತಲು ಮೆರೆವುದ ನೋಡಿದೆವು!
ಬಲಗಡೆ ದೊಡ್ಡ ಮಿಠಾಯಿಯ ರಾಶಿ,
ಎಡಗಡೆ ಬೆಣ್ಣೆಯ ಮುದ್ದೆಯ ರಾಶಿ,
ತಲೆಯೊಳು ಸಕ್ಕರೆ, ಕೈಯೊಳು ಬೆಲ್ಲ
ಬಿಸ್ಕಿಟ್, ಬಿಸ್ಕಿಟ್, ಎಂದುವು ಎಲ್ಲ!
ಹಿಂಬಾಲಿಸಿದೆವು ನಾವುಗಳು
ತಿಂಡಿಯ ತಿನ್ನುವ ಛಲದಿಂದ.
ಕಡೆಗೆಲ್ಲವು ಬರಿ ಬಯಲಾಯ್ತು,
ತಿಂಡಿಯು ಹರಿಯುವ ಹೊಳೆಯಾಯ್ತು'
ಜನರೆಲ್ಲರು ಮಾಯೆಗೆ ಬೆರಗಾಗಿ
'ಜಯಜಯ ಜೋಗೀ!' ಎಂದರು ಕೂಗಿ'
ಬಿಳಿದಾಯಿತು ಗೌಡನ ಮುಖಮಾತ್ರ
ಹಣಕೊಡಬೇಕಾಯ್ತಲ್ಲಾ ಎಂದು!

ಕಿಂದರಿಜೋಗಿಯು ಹಿಂದಕೆ ಬಂದ
'ಗೌಡನೆ, ನಾಣ್ಯಗಳನು ಕೊಡು' ಎಂದ!
ಗೌಡನು ನೋಟದ ಬೆರಗಾಗಿ,
'ಸಾವಿರ ಆರೂ' ಎಂದನು ಜೋಗಿ!
ಗೌಡನು ಚಿಂತನು ತಲೆದೂಗಿ!
'ಕಿಂದರಿಜೋಗಿಯೆ ಹೇಳುವೆ ಕೇಳು
ಸಾವಿರ ಆರನು ನಾ ಕೊಡಲಾರೆನು,
ನೀ ಮಾಡಿದ ಕೆಲಸವು ಹೆಚ್ಚಲ್ಲ
ಸುಮ್ಮನೆ ಕಿಂದರಿ ಬಾರಿಸಿದೆ.
ಇಲಿಗಳ ಹೊಟ್ಟೆಯು ನೀನೇನು?
ಅವುಗಳು ತಮ್ಮಷ್ಟಕೆ ತಾವೇ
ಬಿದ್ದುವು ಹೊಳೆಯಲಿ ಮುಳುಗಿದುವು!
ಕೊಡುವೆನು ನೀ ಪಟ್ಟಿಹ ಶ್ರಮಕಾಗಿ
ಕಾಸ್ವದಾರನು ತೆಗೆದುಕೊ ಜೋಗಿ,
ಪುಂಗಡಲೆಯ ಕೊಂಡುಕೊ ಹೋಗಿ!'
ಈ ಪರಿ ನುಡಿಯಲು ಗೌಡನು, ಜೋಗಿಯು
ಕಂಗಳ ಕೆರಳಿಸುತಿಂತೆಂದ.
'ಆಡಿದ ಭಾಷೆಯ ತಪ್ಪುವೆಯ?
ಸಾವಿರ ಆರನು ಕೊಡದಿರೆ ನೀನು
ಮತ್ತೀಂ ಕಿಂದರಿ ಬಾರಿಸುವೆ!
ನಿನ್ನಾ ಹಳ್ಳಿಯನಾಶಿಸುವೆ!'
'ಸಾವಿರವಾರನು ಕೊಡುವರದಾರು?
ಅಪ್ಪನ ಗಂಟೇ? ಹೋಗೋ, ಜೋಗಿ!
ನೀಂ ಮಾಡುವುದೇನನು ನೋಡುವೆನು
ಮಾತಾಡದೆ ತೊಲಗಿಲ್ಲಿಂದ!
ಹೆಚ್ಚಿಗೆ ಮಾತೇನಾದರು ನುಡಿದರೆ
ಕಿಂದರಿಯೊಡೆಸುವೆ, ಗಡ್ಡವ ಸುಡುವೆ
ನಿನ್ನಂ ತಲೆಯನು ಬೋಳಿಸುವೆ;

ಕಿಂದರಿ ತಂತಿಯು ಹರಿಯುವ ವರೆಗೂ
ಬಾರಿಸ ಬೇಡೆಂದವರಾರು?
ಬಲ್ಲೆಯ ನಾನಾರೆಂಬುದನು?
ಊರ ಪಟೇಲನು ಹಳ್ಳಿಗೆ ಗೌಡ!
ನಡೆ, ನಡೆ, ಮರುಮಾತಾಡದಿರು!'

೧೩

ಗೌಡನ ನುಡಿಯನು ಕೇಳಿದ ಜೋಗಿಯು
ಕಿಂದರಿ ಬಾರಿಸ ತೊಡಗಿದನು.
ನಾದವು ಹಬ್ಬಿತು ಊರೊಳಗೆಲ್ಲಾ,
ಕರೆಯಿತು ಊರಿನ ಹುಡುಗರನೆಲ್ಲಾ!
ಓಡುತ ಬಂದರು ಬಾಲಕರು,
ಕೇಳದೆ ಹಿರಿಯರ ಮಾತುಗಳ:
ಬೊಮ್ಮನಹಳ್ಳಿಯ ಕಿಂದರಿಜೋಗಿ
ಕಿಂದರಿ ಬಾರಿಸಿದನು ಇಂಪಾಗಿ!
'ಟಿಂಗಾ! ಟಿಂಗಾ! ಟಿಂಗಾ! ಟಿಂಗಾ! ನಾದವ ಕೇಳಿ
ಚಂಗಾ! ಚಂಗಾ! ನೆಗೆದರು ಬಾಲಕರು.
ಕಿಂದರಿಜೋಗಿಯು ಹೊರಟನು ಮುಂದೆ
ಬಾಲಕರೆಲ್ಲರು ನಡೆದರು ಹಿಂದೆ!
ಊರಿನ ಜನರೆಲ್ಲರು ಭಯದಿಂದ
ಬಂದರು 'ಮಕ್ಕಳ ಗೌಡನೆ ಕೊಂದ
ಹಾಳಾದೆವು ಗೌಡನ ದೆಸೆಯಿಂದ'
ಗೌಡನು ಕೂಗಿದ ಹೆದರಿಕೆಯಿಂದ
ಜೋಗೀ! ಜೋಗಿ! ಹಿಂತಿರುಗೆಂದ
ಕಿಂದರಿ ಜೋಗಿಯು ನಡೆದನು ಮುಂದೆ,
ಬಾಲರು ಓಡುತ ಹೋದರು ಹಿಂದೆ.
ಕುಂಟರು ಭರದಿಂದೋಡಿದರು!
ಕುರುಡರು ನೋಟವ ನೋಡಿದರು!
ಮೂಗರು ನುಡಿಮಾತಾಡಿದರು!

ಕಿವುಡರು ನಾದವ ಕೇಳಿದರು!
ಬಾಲರು ಭರದಿಂದೋಡಿದರು!
ಜನರೆಲ್ಲಾ ಗೋಳಾಡಿದರು!
ಬೊಮ್ಮನಹಳ್ಳಿಯ ಕಿಂದರಿಜೋಗಿ
ಮಕ್ಕಳ ಹೊಳೆಯೊಳಗಿಳಿಸುವನೆಂದು,
ಓಡಿದರೆಲ್ಲರು ಜೋಗಿಯ ಹಿಂದೆ.
ಹೊಳೆಯಾ ತೀರವ ಜೋಗಿಯು ಸೇರಿ,
ನೀರೊಳಗಿಳಿಯದೆ ಬಲಗಡೆ ತಿರುಗಿ,
ಪೌಡಿಯ ಬೆಟ್ಟಕ್ಕಭಿಮುಖನಾದ,
ಭರದಿಂ ಬೇಗನೆ ಮುಂದಕೆ ಹೋದ.
ಬೆಟ್ಟವನವನೇರುವುದಿಲ್ಲೆಂದು
ಹಾರೈಸಿದರಾ ಊರಿನ ಜನರು.
ಬೆಟ್ಟದ ಬುಡವನು ಸೇರಿದ ಜೋಗಿ,
ನಿಲ್ಲುವನೆಂದೆಲ್ಲಾ ಬಯಸಿದರು!

೧೪

ಪಿಸಿದು ನಿಂತರು ಜನರೆಲ್ಲ!
‘ಅಯ್ಯೋ ಮಕ್ಕಳೆ!’ ಎಂದೆನುತ.
ಜೋಗಿಯು ಬಾರಿಸೆ ಕಿಂದರಿಯ
ಬಾಗಿಲು ತೆರೆಯಿತು ಆ ಗಿರಿಯು!
ಜೋಗಿಯು ನುಗ್ಗಿದನದರಲ್ಲಿ
ಹಿಂದೆಯೆ ಹೋದರು ಬಾಲಕರು!
ಬೆಟ್ಟವು ಬಾಗಿಲು ಹಾಕಿತು ಬೇಗ
ಹಿಂದಕ್ಕುಳಿದವನೊಬ್ಬನೆ ಕುಂಟ.
ಅಲ್ಲಿಗೆ ಬಂದರು ಜನರೋಡಿ
ಕುಂಟನ ಕಂಡರು ಒಂಟಿಯಲಿ,
ಕುಂಟನನುಳಿದವರೆಲ್ಲೆಂದು
ಕೇಳಲು ಬೆಟ್ಟವ ತೋರಿದನು.
ಕಂಬನಿಗರೆದರು ಗೋಳಾಡಿದರು

ಜೋಗಿಯ ಕೂಗುತ ಬಲು ಬೇಡಿದರು.
ಬೆಟ್ಟವು ಕೊಟ್ಟಿತು ಮರುದನಿಯ
ಭೂಮಿಯು ಹೀರಿತು ಕಂಬನಿಯ.
ಉಳಿದಾ ಕುಂಟನು ಅಳುತಿಂತೆಂದ;
'ಅಯ್ಯೋ ಎನಗಿಲ್ಲವರಾನಂದ!
ಜೋಗಿಯು ಕಿಂದರಿ ಬಾರಿಸೆ ಕಂಡೆವು
ಬಣ್ಣದ ಮನೆಗಳ ಪಟ್ಟಣವ,
ಹಣ್ಣುಗಳುದುರುವ ತೋಟಗಳ
ನಾನಾ ಆಟದ ಸಾಮಾನುಗಳ,
ತರತರ ರಾಗದ ಗೊಂಬೆಗಳ,
ಮಾತಿಗೆ ಮೀರಿದ ಆನಂದಗಳ
ಕೈಗೇ ಸಿಕ್ಕುವ ಹಕ್ಕಿಗಳ;
ಜಿಂಕೆಗಳೊಡನಾಡಿದೆವಲ್ಲಿ
ಮೊಲಗಳು ಕುಣಿದವು ನಮ್ಮೊಡನಲ್ಲಿ!
ಅಯ್ಯೋ, ಹೋಯಿತೆ ಆ ನಾಕ
ಅಯ್ಯೋ, ಬಂದಿತೆ ಈ ಲೋಕ!'

೧೬

ಬಂದರು ಎಲ್ಲರು ಬೊಮ್ಮನಹಳ್ಳಿಗೆ
ದುಃಖಾಂಬುಧಿಯೊಳಗೀಜಾಡಿ
ಕಂಬನಿಗರೆದರು ಗೋಳಾಡಿ!
ಈಗಾ ಹಳ್ಳಿಯ ಜೀವಿಯತಾವೂ
ಕಿಂದರಿನಾದವನಾಲಿಸರು;
ಕಿಂದರಿ ಜೋಗಿಗಳಲ್ಲಿಗೆ ಬಂದರೆ
ಬೇಕಾದೆಲ್ಲವನೀಯುವರು!
ಭಾಷೆಯ, ಕೊಟ್ಟರೆ, ಮೂರ್ತಿ, ನಾವು
ಮೋಸವ ಮಾಡದೆ ಸಲ್ಲಿಸಬೇಕು.
ಆದುದರಿಂದ, ಮೂರ್ತಿ, ಕೇಳು
ಸತ್ಯವನೆಂದೂ ತ್ಯಜಿಸದೆ ಬಾಳು!

## ಮಕ್ಕಳ ಕಥೆಗಳು

### ಆರು ಪೈ
ಅಗ್ಗಣಿ ಮುದ್ದೆ

### ಒಂಭತ್ತು ಪೈ
ಗಾಳಿಯ ಕೋಳಿ, ಪುಕ್ಕದ ಕಪ್ಪು
ಬಿಟ್ಟೀ ಬಸವಯ್ಯ
ಅಂಗಳದುಂಗುರ
ಜೋಡು ನಕ್ಷತ್ರ
ಕೊ ಕ್ಕೊ ಕ್ಕೋ ಕೋಳಿ

### ಒಂದು ಆಣೆ
ಮೂರು ಕರಡಿಗಳು
ಮೆಣಸಿನ ಕಾಳಪ್ಪ
ಬತ್ತನ ಓಟ
ಗೋವಿಂದಾ! ಗೋವಿಂದಾ!
ಚಿಕ್ಕನ ಬಿಡಾರ ಚೇರೆ
ಸಿಗಡಿ ಯಾಕೆ ಒಣಗಲಿಲ್ಲ?
ಗುಡುಗುಡು ಗುಮ್ಮಟ ದೇವರು

*ಇಲಿಗಳ ಥಕ್ಕಥೈ
*ತಟಪಟ ಹಸಿಯಪ್ಪ
*ಜೇನು ಸತ್ತು ಕಾಗೆ ಬ[illegible]
ಮಾತಾಡೋ ರಾಮಪ್ಪ
ಗೋಣಿತಟ್ಟಿನ ಪಟ್ಟೆಹುಲಿ

### ಒಂದು ಆಣೆ ಮೂರು ಪೈ
ಏಕ್‌ರೋಜ್‌ಕಾ ಖಲೀಫಾ

### ಒಂದು ಆಣೆ ಆರು ಪೈ
ಚೊಕ್ಕಬಾಯಿ ಕೊಕ್ಕರಾಜ

### ಎರಡು ಆಣೆ
ಸಿಂದಬಾದ ನಾವಿಕ
ಅಲ್ಲಾವುದ್ದೀನನ ವಿಚಿತ್ರ ದೀಪ

### ಎರಡು ಆಣೆ ಆರು ಪೈ
*ಅಜ್ಜ ಸಾಕಿದ ಮಗು
*ಅಗೋಳಿ ಮಂಜಣ

## ಇತರ ಪುಸ್ತಕಗಳು

### ಒಂಭತ್ತು ಪೈ
ಮಗ್ಗಿ ಪುಸ್ತಕ

### ಎರಡು ಆಣೆ
ಹೊಸ ಕನ್ನಡ ಪುಸ್ತಕ ೧ನೇ ಭಾಗ
೨ನೇ ಭಾಗ

ಚೀನ
ಆಫಘಸ್ಥಾನ

### ಮೂರು ಆಣೆ
ರತಿಕಾಂತನ ಮೇಲು
ಚಂಡಕೌಶಿಕ
ಕಾಣಿಕೆ

### ನಾಲ್ಕು ಆಣೆ
ಸಮಾಜಜ್ಯೋತಿ
ವಾರಂಗಲೂರಿನ ಗತವೈಭವ
ಕೃಷ್ಣ ಸಂಧಾನ

ಒಂದನೆ ಎರಡನೆ ದರ್ಜೆಯ ಕಥೆಗಳು (೧)

### ಐದು ಆಣೆ
ಒಂದನೆ ಎರಡನೆ ದರ್ಜೆಯ ಕಥೆಗಳು (೨)
ಐದನೆ ದರ್ಜೆಯ ಚರಿತ್ರೆ ಮತ್ತು ಕಥೆಗಳು
ಅಜಿತ ಕುಮಾರ

ಚಾಣಕ್ಯತಂತ್ರ ೧ನೆಯ ಭಾಗ

### ಆರು ಆಣೆ
ಕೋಟಿಚೆನ್ನಯ
ರಮಾ ಮಾಧವ
ಸೀತಾರಾಮ
ಯಾದವ ಕೃಷ್ಣ
ಭೀಷ್ಮನ ಕಥೆ
ಪದ್ಯಕಥಾವಳಿ ಭಾಗ ೧
ಕಾವ್ಯರತ್ನಾಕರ

### ಎಂಟು ಆಣೆ
ಕಲಿಯುಗದ ಭೀಷ್ಮ
ಹಿಡಿಂಬೆ
ಚಾಣಕ್ಯತಂತ್ರ ೨ನೆಯ ಭಾಗ
*ಲಘುವಿಜ್ಞಾನ ಪಾಠಮಾಲಿಕೆ, ಪ್ರವೇಶ ಪುಸ್ತಕ (೧)
*ಲಘುವಿಜ್ಞಾನ ಪಾಠಮಾಲಿಕೆ ಪ್ರಥಮ ಪುಸ್ತಕ (೨)
ಪದ್ಯಸಂಗ್ರಹ
ಪದ್ಯಕಥಾವಳಿ ಭಾಗ ೨

### ಹತ್ತು ಆಣೆ
ನಾಟಕ ಕಲೆ

### ಹನ್ನೆರಡು ಆಣೆ
ರಾಮಾಶ್ವಮೇಧ

ಸುಭದ್ರಾ ವಿಜಯ ನಾಟಕ (೧ ರೂಪಾಯಿ)

---
*ಇವು ಸಚಿತ್ರ ಪುಸ್ತಕಗಳು

